ವಿಧಾನ ಮಂಡಲದ ಉಭಯ ಸದನಗಳನ್ನುದ್ದೇಶಿಸಿ ರಾಜ್ಯಪಾಲರು ಮಾಡಿದ ಭಾಷಣದ ಅಧಿಕೃತ ವರದಿ

ಸೋಮವಾರ, ದಿನಾಂಕ 20ನೇ ಮಾರ್ಚ್ 1995

ಕರ್ನಾಟಕ ವಿಧಾನ ಸಭೆ ಹಾಗೂ ವಿಧಾನ ಪರಿಷತ್ತಿನ ಸಂಯುಕ್ತಾಧೀವೇಶನವನ್ನು ಉದ್ದೇಶಿಸಿ ವಿಧಾನ ಸಭೆಯ ಸಭಾಂಗಣದಲ್ಲಿ ಮಧ್ಯಾಹ್ನ 1.00 ಗಂಟೆಗೆ ಮಾಡಿದ ಭಾಷಣ.

ರಾಜ್ಯಪಾಲರು ಮಧ್ಯಾಹ್ನ 12.55 ಗಂಟೆಗೆ ವಿಧಾನ ಸೌಧದ ಮುಖ್ಯದ್ವಾರದ ಬಳಿ ಇರುವ ದ್ವಾರಮಂಟಪಕ್ಕೆ ಆಗಮಿಸಿದರು. ರಾಜ್ಯಪಾಲರು ತಮ್ಮ ಕಾರಿನಿಂದ ಇಳಿದ ಬಳಿಕ ಅವರನ್ನು ಮಾನ್ಯ ಅಧ್ಯಕ್ಷರು, ಮಾನ್ಯ ಸಭಾಪತಿಯವರು ಮತ್ತು ವಿಧಾನಮಂಡಲದ ಕಾರ್ಯದರ್ಶಿಯವರು ಸ್ವಾಗತಿಸಿದರು. ನಂತರ ಪೂರ್ವ ಭಾಗದಲ್ಲಿರುವ ಲಿಫ್ಟಿಗೆ ರಾಜ್ಯಪಾಲರನ್ನು ಕರೆದೊಯ್ಯಲಾಯಿತು. ಮೊದಲನೆಯ ಮಹಡಿಯಲ್ಲಿ ಲಿಫ್ಟ್‌ನಿಂದ ಹೊರ ಬಂದ ಬಳಿಕ ಈ ಕೆಳಕಂಡ ಕ್ರಮದಲ್ಲಿ ಮೆರವಣಿಗೆಯನ್ನು ರೂಪಿಸಲಾಯಿತು.

ಕಾರ್ಯದರ್ಶಿಯವರು

ಮಾನ್ಯ ಅಧ್ಯಕ್ಷರು ಮಾನ್ಯ ಸಭಾಪತಿಯವರು

ರಾಜ್ಯಪಾಲರು

ಎ.ಡಿ.ಸಿ.

ಈ ರೀತಿಯ ಮೆರವಣಿಗೆಯು ವಿಧಾನ ಸಭಾ ಸದನದ ಕಡೆಗೆ ಹೊರಟಿತು. ಸಭಾಸದನದ ದ್ವಾರದ ಬಳಿ ಮೆರವಣಿಗೆ ಬಂದ ಕೂಡಲೆ, ರಾಜ್ಯಪಾಲರ ಆಗಮನವನ್ನು ಮಾರ್ಷಲ್‌ರವರು ಸಭೆಗೆ ತಿಳಿಸಿದರು ಮತ್ತು ರಾಷ್ಟ್ರಗೀತೆಯನ್ನು ನುಡಿಸಲಾಯಿತು. ರಾಜ್ಯಪಾಲರ ಸದನವನ್ನು ಪ್ರವೇಶಿಸಿ ವೇದಿಕೆಯ ಮೇಲೆ ಕುಳಿತುಕೊಳ್ಳುವ ತನಕ ಮಾನ್ಯ ಸದಸ್ಯರುಗಳು ಎದ್ದು ನಿಂತುಕೊಂಡಿದ್ದರು.

ಸಭಾಸದನದ ವೇದಿಕೆಯ ಮುಂದೆ ಬಂದ ಬಳಿಕ ಮೆರವಣಿಗೆ ಇಬ್ಭಾಗವಾಯಿತು. ವೇದಿಕೆಯ ಮೇಲೆ ಮಾನ್ಯ ಸಭಾಪತಿಯವರು ರಾಜ್ಯಪಾಲರ ಎಡಭಾಗದಲ್ಲಿಯೂ ಕುಳಿತುಕೊಂಡರು. ರಾಜ್ಯಪಾಲರು ವೇದಿಕೆಯ ಮಧ್ಯಭಾಗದ ಆಸನದಲ್ಲಿ ಕುಳಿತುಕೊಂಡರು. ಕಾರ್ಯದರ್ಶಿಯವರು ವೇದಿಕೆಯ ಮುಂದುಗಡೆ ಇರುವ ಆಸನದಲ್ಲಿ ಕುಳಿತುಕೊಂಡರು.

His Excellency the Governor :

Hon'ble Mr. Chairman, Hon'ble Mr. Speaker and Hon'ble Members of both the Houses,

I am happy to welcome all of you to this Joint Session of the Karnataka Legislature. I have been privileged to serve the people of this progressive State as its Governor for the past four years. It has been a pleasure to observe the proper and efficient functioning of the democratic institutions in the State.

2. Maintenance of law and order is a basic prerequisite for the development of the State. I am happy to say that the overall law and order situation in out State has been good. Hoisting of the National Flag at the Idgah Maidan

at Hubli had caused concern in the Country eversince January 1992. It took a tragic turn on 15th August 1994, when six persons lost their lives in the police firing. My Government left no stone unturned to solve the problem amicably by having a wide range of consultations with all sections of the community leading to the peaceful hoisting of the Nation Flag on 26th January 1995. My Government deserves appreciation for the successful defusion of this explosive situation.

(At this stage hon. member Sri Vatal Nagaraja started to read his own speech, and some hon. Indipendent Members from Belgaum shouted slogns and with drew from the house.)

3. Elections to the Zilla and Taluk Panchayats could not be held in the past. The Supreme Court of India had directed the State Government to complete the elections to the Zilla and Taluk Panchayats by 31st March 1995. I am happy to inform the House that my Government has successfully conducted the elections peacefully in accordance with the undertaking given to the Court.

4. The State has been a pioneer in legislation power to the people through a decentralised system of local self-Government. To make decentralisation meaningful at the District, Taluk and Village levels, my Government proposes to amend the Karnataka Panchayat Raj Act, 1993. For this purpose an Expert Committee has been constituted under the Chairmanship of the Reserve Bank India, to study and recommend the changes required.

5. Land has always been a crucial resource for industrialisation and other developmental activities. Th existing legal provisions relating to acquisition of land do act as constrains. There is also a great need to give special thrust for floriculture and other related horticultural activities which have considerable export potential. It is, therefore, proposed to amend certain provisions of the Karnataka Land Reforms Act and the Karnataka Land Revenue Act to ensure that possession of land for industrial and other aforesaid purposes is facilitated, thereby promotiong faster growth in these areas.

6. Production of foodgrains in the State was 84.88 lakh Metric tonnes during the year 1993-94. It is hoped to increase it to atleast 86 lakh Metric Tonnes by 1995-96. It has been noticed that despite considerable investment in irrigation, there has been no commensurate increase in agricultural production has caused serious concern to my Government. It has, therefore, been decided to formulate a comprehensive programme for irrigated areas and dry lands. In addition to the centrally sponsored programmes like the National Watershed

Development Programme for Rainfed Areas (NWDPRA), Government has taken up several projects with external assistance. These projects are intended to raise production in rainfed areas by following he watershed development approach. My Government intends to strengthen the Command Area Development Authorities. A Sub Committee of State Planning Board has been constituted under the Chairmanship of the Minister for Agriculture to formulate an agricultural policy for the State.

7. The prices of fertilisers have shot up in the wake of reduction in subsidy by the Government of India, making it difficult for the farmers to purchase the same. The consumption of phosphatic fertiliser has come down. In order to reduce the cost of some extent and to give some relief, my Government has decided to abolish the Turn Over Tax upto 31st March 1995. My Government has also resolved to convince the Government of India of the imperative necessity of restoring the subsidy on fertilisers to the original levels so as to reduce the input cost for the farmers.

8. In my address to the Joint Session of the Legislature on 28th December 1994. I had mentioned that interest including penal interest on outstanding agricultural loans in the co-operative sector would be waived, provided the entire principal amount was paid by 31st March 1995. My Government has implemented this promise. The orders issued in this behalf envisage waiver of interest on short term and medium term loans given by co-operatives. In the case of long term loans, interest above 9% has also been waived. In future Government will itself bear interest above Nine per cent in respect of all Co-operative converted loans, whether they be short term, medium term or long term, repaid within the stipulated time. Government will reimburse the interest waived to the fullest extent. There will be no additional financial burden on the co-operatives. Government has already agreed to make advance payment to KSCARD Bank before 31-3-1995. Inspite of giving this assurance. NABARD has stopped refinancing facility. My Government has taken up the matter with NABARD and the Government of India. I hope that the issue will be resolved amicably.

9. Government has reviewed the drinking water situation in the State. It will be the endeavour of my Government to ensure that adequate drinking water is supplied to all the villages and towns during this summer. Necessary funds have already been released.

10. Irrigation has always been a major plank in our developmental effort. So far a cumulative potential of 31.97 lakh hectares has been created from

all sources against an ultimate 55 lakh hectares. Additional irrigation potential of 99,853 hectares under major and medium irrigation and 9,000 hectares under minor irrigation is proposed to be created during 1995-96. Members are aware that the 734 TMC of water allocated to the State by the Krishna Water Disputes Tribunal will have to be fully utilised by 2000 AD. In order to utilise the allocated quantum of water and to complete the Upper Krishna Project by 2000 AD, a Company has been floated under the name and style of "Krishna Bhagya Jala Nigam". The Nigam has proposed to raise a sum of Rs. 800 Crores in two instalments during 1995-96 by floating bons. Sharing of Cauvery Waters is being adjudicated oy the Cauvery Waters is being adjudicated by the Cauvery Water Disputes Tribunal. The State Government will ensure full utilisation of its rightful share.

11. My Government proposes to amend the Irrigation Act for supply of water on volumentric basis through co-operatives and to collect water rates as may be prescribed.

12. Members are aware of the increasing demand for power in all sectors of economic activity. It is no secret that the pace of industrialisation in the State has been affected owing to the continuing shortage of power. In an effort to make good this shortage of power. In an effort to make good this deficiency, my Government has taken a major step to increase the installed capacity to 9,000 MW by 2000 AD. The power Purchase Agreement in respect of the 1.000 MW Thermal Power Project at Mangalore by Cogentrix has been signed. My Government is actively considering approval of Thermal Projects at Bangalore, Raichur, Hospet, Mangalore and Chamalapur (Mysore District) as well as the Hydel Project at Almatti (Bijaput District). With the completion of these projects, a new chapter in achieving self-sufficiency would have been opened in the economic history of the State.

13. In the wake of liberalisation and opening up of the economy, there has been tremendous upsurge of interest by foreign and domestic investors. In the past two months, delegations from almost all the major countries have visited the State and held discussions. The early clearances given by my Government to establish the international Airport near Bangalore as well as the decision to take up the Mass Rapid Transportation Project in Bangalore have been widely welcomed. Within a short time, a positive, pro-active and proinvestment milieu has been created.

14. Though most of our brethren continue to live in the rural areas, latterly there has been a perceptible movement of people into the urban centres. This phenomenon is likely to continue in the foreseeable future. The unprecedented increase in the population of Bangalore during the past two decades bring home this point very well. In the wake of the swift increase in urban population, acute shortage of housing, inadequate drinking water supply, poor sanitation and the ever increasing pressure on infrastructure have all notice noticeably surfaced calling for immediate remedial measures. Against this backdrop, Bangalore City has been included in the Mega City Development Programme. As many as 28 projects involving an outlay of Rs. 248.50 Crores have been prepared and will be implemented by the Karnataka State Infrastructural Development Corporation and other agencies. Another important infrastructural development project is on the anvil with the assistance of the Asian Development Bank. This project aims at the creation of satellite towns at Ramanagaram and Channapatna. Tumkur is envisaged to become a countermagnet to Bangalore along with Mysore. An Express Way between Bangalore and Mysore is also very much on the card.

15. Housing constitutes a basic necessity. It is the intention of my Government that every houseless person in the State whether in the rural or urban areas should have a roof over his head. A comprehensive survey has been taken up for identifying the siteless and houseless persons. No doubt the problem of Housing will pose a formidable challenge calling for very large sized investments. Given its limited resources. Government alone cannot fully take up this task. It is, therefore, proposed to involve the private sector actively. My Government is contemplating necessary legislative changes to facilitate private investment. The Government of India will also be requested to bring about appropriate changes in the Urban Land Ceiling and Regulations Act, 1976.

16. A good network of roads is a must for the development of any area. Increasing vehicle population and the rising incidence of accidents call for immediate action on this front. Many of our roads, even the trunk roads need to be upgraded. Budgetary constraints do not permit investment in this basic infrastructure on the scale required. My Government would like to involve private sector in the development of roads. Such private sector participation is envisaged in the building of Express-Ways between Bangalore-Mysore, Bangalore-Hassan-Mangalore and Bangalore-Devanahalli among others on Build. Operate (BOO) or Build, Own, Transfer (BOT) basis.

17. Recent months have witnessed inflationary trends affecting the poorer sections of the community adversely. My Government feels that it is necessary

to cushion the effect of rising prices through a food security programme. Ten Kgs. of rice will be supplied at the subsidised rate of Rs. 3.20 per Kg to all the green card holders with effect from 1st April 1995.

18. The quality of life of people in the rural areas needs special attention. The investment in food supply, health care and primary education have a direct bearing on improving the quality of life. At the primary health level, the State has 1357 Primary Health Centres and 7993 Sub-Centres. During the next five years, the Government will construct new buildings in all the needy Primary Health Centres and Sub-Centres. Wherever glaring gaps continue to exist in tribal areas and backward regions, new Primary Health Centres will be opened. This will bring down the population that each Centre has to cater and make health care more easily accessible. The emphasis will also be on reducing infant mortality and maternal mortality. Government are negotiating with external agencies like the World Blank for a major project to fill the gaps in the State's secondary level health care system.

19. The State has a large network of private sector medical institutions, hospitals, nursing homes and medical practitioners. There is a need to regulate the functioning of the private sector. My Government will bring forth a comprehensive legislation to make this sector more accountable. Members are aware of the unfortunate incidents of kidney transplants, involving exploitation of poor people, that came to light recently. to prevent the recurrence of such happenings, my Government has decided to adopt the Central Human Organs Transplant Act.

20. As per the 1991 Census the literacy percentage in the State is 55.98 only. The 'Saksharatha Andolana' has improved the literacy position substantially. Increasing the literacy level and strengthening of the primary education system are essential to make any meaningful improvement. Infrastructural facilities like school building and learning - teaching materials would be provided on a higher scale during 1995-96. The World Bank assisted project of District Primary Education Programmed would be vigorously implemented.

21. Members are aware of the problems faced in the admissions to professional colleges. My Government proposes to bring a comprehensive legislation to safeguard the interests of students as well as to remove the genuine problems of those managing these colleges.

22. Education and economic development of Scheduled Castes and Scheduled Tribes will receive greater attention of my Government. Adequate

and suitable training will be given to enable them to get gainful employment. Income generating assets will be created for the rural families of these sections so that they can have sustained income. A detailed socio-economic survey of all SC and ST families will be taken up. My Government will seriously view attrocities and acts of oppression against persons belonging to Scheduled Castes and Scheduled Tribes and take severe action against those found guilty. My Government is eager to formulate a reservation policy for Backward Classes. A Cabinet Sub Committee has been constituted to study and recommend the reservation policy for 1995-96. Socio-economic development of minorities will get a major thrust.

23. Participation of women in the development of the State is of prime importance to my Government. A State Commission for Women will be constituted shortly. I am happy to inform the House that atleast one third of the total beneficiaries in selected schemes would be women. The coverage of the the Mahila Samrudhi Yojana will be expanded.

24. In the malnad areas of the State particularly Chickmangalur, Hassan and Kodagu Districts coffee is being grown unauthorisedly on Government lands over a long period. Though the problem is an old one, it has defied solution so far. My Government intends regularisation of such lands where coffee and other plantation crops are grown. A Sub-Committee of the Cabinet has been constituted to study the problem and recommend necessary changes.

25. As per the national norms, the State should have one-third of the area under forests. The State has at present only 20% of its geographical area under forest cover. Massive efforts at raising plantations will be continued. Comprehensive amendments to Karnataka Forest Act and Karnataka Tree Preservation Act will be undertaken to prevent illegal felling. Government will take up the issue of regularising unauthorised occupatin of forest lands by small and marginal farmers with the Government of India.

26. My Government will vigorously foster the use of Kannada in administration at all levels. The existing schemes for the promotion of Kannada are being reviewed. The institutions working in this field will be strengthened.

27. Good governance should redress the grievances of the public expeditiously. Mass Contact Programmes will be intensified. Field level officers will compulsorily visit rural areas.

28. In my address I have sought to cover only some important areas. My Government will implement a number of other programmes for the allround development of the State. Economic development with social justice will continue to be my Government's motto. Before I conclude my speech. I would like to express my sincere hope that both the Houses will transact their business effectively in the best interest of the people of Karnataka. I wish you all success in your endeavour.

Jai Hind, Jai Karnataka.

House adjourned at 1-15 P.M.

ಸನ್ಮಾನ್ಯ ರಾಜ್ಯಪಾಲರು ಮಾಡಿದ ಭಾಷಣದ ಕನ್ನಡದ ಭಾಷಾಂತರ

ಮಾನ್ಯ ರಾಜ್ಯಪಾಲರು :

ಸನ್ಮಾನ್ಯ ಸಭಾಪತಿಗಳೇ, ಸನ್ಮಾನ್ಯ ಸಭಾಧ್ಯಕ್ಷರೇ ಮತ್ತು ಉಭಯ ಸದನಗಳ ಸನ್ಮಾನ್ಯ ಸದಸ್ಯರೇ,

ತಮ್ಮನ್ನೆಲ್ಲ ಕರ್ನಾಟಕ ರಾಜ್ಯದ ವಿಧಾನ ಮಂಡಲದ ಈ ಜಂಟಿ ಅಧಿವೇಶನಕ್ಕೆ ಸ್ವಾಗತಿಸಲು ನಾನು ಸಂತೋಷಪಡುತ್ತೇನೆ. ಕಳೆದ ನಾಲ್ಕು ವರ್ಷಗಳಿಂದ ಈ ಪ್ರಗತಿಶೀಲ ರಾಜ್ಯದ ರಾಜ್ಯಪಾಲನಾಗಿ ಪ್ರಜೆಗಳ ಸೇವೆಯನ್ನು ಮಾಡುವ ಸದವಕಾಶ ನನಗೆ ದೊರಕಿದೆ. ಈ ರಾಜ್ಯದ ಪ್ರಜಾಸತ್ತಾತ್ಮಕ ಸಂಘ ಸಂಸ್ಥೆಗಳು ಅತ್ಯಂತ ಯುಕ್ತ ಮತ್ತು ದಕ್ಷ ರೀತಿಯಲ್ಲಿ ಕಾರ್ಯನಿರ್ವಹಿಸುತ್ತಿರುವುದನ್ನು ಗಮನಿಸುವುದರಲ್ಲಿ ನನಗೆ ಹೆಚ್ಚಿನ ಸಂತೋಷವೆನಿಸಿದೆ.

2. ಯಾವುದೇ ರಾಜ್ಯ ಪ್ರಗತಿ ಹೊಂದಲು ಅಲ್ಲಿ ಕಾನೂನು ಮತ್ತು ಶಾಂತಿಪಾಲನಾ ವ್ಯವಸ್ಥೆ ಸಮರ್ಪಕವಾಗಿರಬೇಕು. ಅದು ಈ ರಾಜ್ಯದಲ್ಲಿ ಒಟ್ಟಾರೆ ಚೆನ್ನಾಗಿದೆಯೆಂದು ತಿಳಿಸಲು ಸಂತೋಷಪಡುತ್ತೇನೆ. 1992ರ ಜನವರಿಯಿಂದ ಹುಬ್ಬಳ್ಳಿಯ ಈದ್ಗಾ ಮೈದಾನದಲ್ಲಿ ರಾಷ್ಟ್ರಧ್ವಜವನ್ನು ಹಾರಿಸುವ ವಿಚಾರ ರಾಷ್ಟ್ರದ ಗಮನವನ್ನು ಸೆಳೆದಿತ್ತು. ಅದು 1994ರ ಆಗಸ್ಟ್ 15ರಂದು ಪೋಲೀಸರ ಗುಂಡುಗಳಿಗೆ ಆರು ಜನ ಜೀವತೆತ್ತ ಸಂದರ್ಭದಲ್ಲಿ ವಿಷಮಸ್ಥಿತಿಯನ್ನು ಮುಟ್ಟಿತು. ಅನ್ಯೋನ್ಯವಾಗಿ ಈ ಸಮಸ್ಯೆಯನ್ನು ಬಗೆಹರಿಸಲು ನನ್ನ ಸರ್ಕಾರ ಎಲ್ಲಾ ಪ್ರಯತ್ನಗಳನ್ನು ಮಾಡಿತು. ಸಮಾಜದ ಎಲ್ಲಾ ವರ್ಗಗಳ ಜೊತೆ ಅದು ಕೈಗೊಂಡ ಸುಧೀರ್ಘ ಮತ್ತು ಮುಕ್ತ ಸಮಾಲೋಚನೆಗಳ ಫಲವಾಗಿ 1995ರ ಜನವರಿ 26ರಂದು ಈದ್ಗಾ ಮೈದಾನದಲ್ಲಿ ಶಾಂತಿಯುತವಾಗಿ ರಾಷ್ಟ್ರಧ್ವಜ ಹಾರಿತು. ಇಂಥ ಸ್ಫೋಟಕ ಸಮಸ್ಯೆಯನ್ನು ಸಮರ್ಥವಾದ ರೀತಿಯಲ್ಲಿ ಬಗೆಹರಿಸಿದ ಸರ್ಕಾರ ಅಭಿನಂದನಾರ್ಹ.

3. ಜಿಲ್ಲಾ ಮತ್ತು ತಾಲ್ಲೂಕು ಪಂಚಾಯತ್‌ಗಳಿಗೆ ಚುನಾವಣೆಯಲ್ಲಿ ಈ ಹಿಂದೆ ಮಾಥಲಾಗಿರಲಿಲ್ಲ, 1995ರ ಮಾರ್ಚ್ 31ರ ಒಳಗಾಗಿ ಜಿಲ್ಲಾ ಮತ್ತು ತಾಲ್ಲೂಕು ಪಂಚಾಯತ್‌ಗಳ ಚುನಾವಣಾ ಪ್ರಕ್ರಿಯೆಯನ್ನು ಪೂರ್ಣಗೊಳಿಸಬೇಕೆಂದು ಭಾರತದ ಸರ್ವೋಚ್ಚ ನ್ಯಾಯಾಲಯವು ಆದೇಶಿಸಿತ್ತು. ಸರ್ವೋಚ್ಚ ನ್ಯಾಯಾಲಯಕ್ಕೆ ನನ್ನ ಸರ್ಕಾರ ನೀಡಿದ ಮಾತಿಗನುಗುಣವಾಗಿ ಚುನಾವಣೆಗಳನ್ನು ಶಾಂತಿಯುತವಾಗಿ ಹಾಗೂ ಯಶಸ್ವಿಯಾಗಿ ನಡೆಸಿತು ಎನ್ನುವುದನ್ನು ತಿಳಿಸಲು ನಾನು ಸಂತೋಷಪಡುತ್ತೇನೆ.

4. ಸ್ಥಳೀಯ ಸ್ವಯಂ ಆಡಳಿತ ಸಂಸ್ಥೆಗಳ ಮೂಲಕ ವಿಕೇಂದ್ರೀಕೃತ ಶಾಸನಬದ್ಧ ಅಧಿಕಾರವನ್ನು ಜನತೆಗೆ ನೀಡುವಲ್ಲಿ ನನ್ನ ರಾಜ್ಯವೇ ಮೊಟ್ಟಮೊದಲನೆಯದು. ಜಿಲ್ಲಾ, ತಾಲ್ಲೂಕು ಮತ್ತು ಗ್ರಾಮ ಮಟ್ಟದಲ್ಲಿ ವಿಕೇಂದ್ರೀಕರಣವನ್ನು ಅರ್ಥವತ್ತಾಗಿ ಮಾಡಲು ನನ್ನ ಸರ್ಕಾರವು 1993ರ ಕರ್ನಾಟಕ ಪಂಚಾಯತ್‌ರಾಜ್ ಕಾಯಿದೆಯನ್ನು ತಿದ್ದುಪಡಿ ಮಾಡಲು ಉದ್ದೇಶಿಸಿದೆ. ಈ ಸಲುವಾಗಿ ಭಾರತೀಯ ರಿಸರ್ವ್ ಬ್ಯಾಂಕಿನ ಮಾಜಿ ಡೆಪ್ಯೂಟಿ ಗವರ್ನರ್ ಆದ ಡಾ॥ ಕೆ.ಎಸ್. ಕೃಷ್ಣಸ್ವಾಮಿ ಅವರ ಅಧ್ಯಕ್ಷತೆಯಲ್ಲಿ ತಜ್ಞರ ಸಮಿತಿಯೊಂದನ್ನು ರಚಿಸಲಾಗಿದೆ.

5. ಕೈಗಾರೀಕೀಕರಣ ಮತ್ತು ಇತರೇ ಅಭಿವೃದ್ಧಿ ಚಟುವಟಿಕೆಗಳಿಗೆ ಭೂಮಿಯೇ ಮುಖ್ಯವಾದ ಸಂಪನ್ಮೂಲ. ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಪ್ರಸಕ್ತ ಕಾನೂನಿನ ವಿಧಿಗಳು ಕೆಲವು ತೊಡಕುಗಳನ್ನು ಒಡ್ಡಿವೆ. ಸಾಕಷ್ಟು ರಕ್ಷಣೆಯ ಅವಕಾಶಗಳನ್ನು ಹೊಂದಿರುವ ಪುಷ್ಕೋದ್ಯಮ ಮತ್ತು ತೋಟಗಾರಿಕೆ ಸಂಬಂಧಪಟ್ಟ ಇತರ ಚಟುವಟಿಕೆಗಳ ಕಡೆಗೆ ವಿಶೇಷ ಒತ್ತನ್ನು ಕೊಡುವ ಅವಶ್ಯಕತೆಯಿದೆ. ಆದಕಾರಣ, ಕರ್ನಾಟಕ ಭೂಸುಧಾರಣಾ

ಕಾಯಿದೆ ಮತ್ತು ಕರ್ನಾಟಕ ಭೂಕಂದಾಯ ಕಾಯಿದೆಯ ಕೆಲವು ಉಪಬಂಧಗಳನ್ನು ತಿದ್ದುಪಡಿ ಮಾಡುವ ಉದ್ದೇಶವನ್ನು ನನ್ನ ಸರ್ಕಾರ ಹೊಂದಿದೆ. ಇದರಿಂದಾಗಿ ಕೈಗಾರಿಕೆ ಮತ್ತು ಇತರ ಉದ್ದೇಶಗಳಿಗೆ ಭೂಮಿಯ ಒಡೆತನ ಹೊಂದಲು ಅನುಕೂಲವಾಗುತ್ತದೆ. ಅಂತೆಯೇ ಈ ಕ್ಷೇತ್ರಗಳ ಶೀಘ್ರ ಅಭಿವೃದ್ಧಿಗೆ ಸಹಾಯವಾಗುತ್ತದೆ.

6. 1993-94ನೇ ಸಾಲಿನಲ್ಲಿ ರಾಜ್ಯದ ಆಹಾರಧಾನ್ಯಗಳ ಉತ್ಪಾದನೆ 84.88 ಲಕ್ಷ ಮೆಟ್ರಿಕ್ ಟನ್ ಆಗಿತ್ತು. ಇದನ್ನು 1995-96ನೇ ಸಾಲಿನಲ್ಲಿ 86 ಲಕ್ಷ ಮೆಟ್ರಿಕ್ ಟನ್ನುಗಳಿಗಾದರೂ ಹೆಚ್ಚಿಸಬೇಕೆಂದು ಆಶಿಸಲಾಗಿದೆ. ನೀರಾವರಿ ಕ್ಷೇತ್ರದಲ್ಲಿ ಸಾಕಷ್ಟು ಬಂಡವಾಳವನ್ನು ಹೂಡಿದ್ದಾಗ್ಯೂ ಇದಕ್ಕನುಗುಣವಾಗಿ ಹೆಚ್ಚಿನ ಕೃಷಿ ಉತ್ಪಾದನೆ ಆಗಲಿಲ್ಲ ಎಂಬುದು ಗಮನಕ್ಕೆ ಬಂದಿದ್ದು, ಈ ಕ್ಷೇತ್ರದಲ್ಲಿನ ಸ್ಥಗಿತತೆ ಸರ್ಕಾರಕ್ಕೆ ಗಂಭೀರವಾದ ಆತಂಕವನ್ನು ಉಂಟುಮಾಡಿದೆ. ಸರ್ಕಾರವು ನೀರಾವರಿ ಮತ್ತು ಒಣಭೂಮಿಗಳಿಗೆ ಸಂಬಂಧಿಸಿದಂತೆ ವ್ಯಾಪಕವಾದ ಕಾರ್ಯಕ್ರಮವನ್ನು ಹಮ್ಮಿಕೊಳ್ಳುವ ನಿರ್ಧಾರವನ್ನು ಮಾಡಿದೆ. ಮಳೆ ಆಶ್ರಿತ ರಾಷ್ಟ್ರೀಯ ಜಲಾನಯನ ಅಭಿವೃದ್ಧಿ ಕಾರ್ಯಕ್ರಮಗಳಂಥ ಕೇಂದ್ರ ಪುರಸ್ಕೃತ ಯೋಜನೆಗಳ ಜೊತೆಗೆ ವಿದೇಶಿ ನೆರವಿನೊಡನೆ ಅನೇಕ ಕಾರ್ಯ ಯೋಜನೆಗಳನ್ನು ಕೈಗೊಳ್ಳಲಾಗಿದೆ. ರಾಷ್ಟ್ರೀಯ ಜಲಾನಯನ ಅಭಿವೃದ್ಧಿ ಮಾದರಿಯನ್ನನುಸರಿಸಿ ಮಳೆ ಆಶ್ರಿತ ಪ್ರದೇಶಗಳಲ್ಲಿ ಹೆಚ್ಚಿನ ಉತ್ಪನ್ನವನ್ನು ಪಡೆಯುವುದೇ ಈ ಯೋಜನೆಗಳ ಉದ್ದೇಶವಾಗಿದೆ. ನೀರು ಒದಗಿಸುವ ಪ್ರದೇಶಾಭಿವೃದ್ಧಿ ಪ್ರಾಧಿಕಾರಗಳನ್ನು ಬಲಗೊಳಿಸಲು ಸಹ ನನ್ನ ಸರ್ಕಾರವು ಉದ್ದೇಶಿಸಿದೆ. ನಮ್ಮ ರಾಜ್ಯದ ಕೃಷಿ ನೀತಿಯನ್ನು ರೂಪಿಸುವುದಕ್ಕಾಗಿ ಕೃಷಿ ಸಚಿವರ ಅಧ್ಯಕ್ಷತೆಯಲ್ಲಿ ರಾಜ್ಯ ಯೋಜನಾ ಮಂಡಳಿಯ ಒಂದು ಉಪ ಸಮಿತಿಯನ್ನು ರಚಿಸಲಾಗಿದೆ.

7. ಕೇಂದ್ರ ಸರ್ಕಾರವು ಸಹಾಯಧನವನ್ನು ಕಡಿಮೆ ಮಾಡಿದ್ದರಿಂದ ರಸಗೊಬ್ಬರಗಳ ಬೆಲೆಯು ತುಂಬಾ ಹೆಚ್ಚಾಗಿದೆ. ಇದರಿಂದಾಗಿ ರಸಗೊಬ್ಬರಗಳನ್ನು ಖರೀದಿಸಲು ರೈತರಿಗೆ ತೊಂದರೆಯಾಗಿದೆ. ವಾಸ್ತವವಾಗಿ ಫಾಸ್ಪೇಟ್ ಗೊಬ್ಬರದ ಬಳಕೆ ಕಡಿಮೆಯಾಗಿದೆ. ಬೆಲೆಯನ್ನು ಇಳಿಸಿ ಸ್ವಲ್ಪ ಮಟ್ಟಿಗಾದರೂ ಪರಿಹಾರ ನೀಡುವ ಸಲುವಾಗಿ 1995ರ ಮಾರ್ಚ್ 31ರ ವರೆಗೆ ಮಹಿವಾಟು ತೆರಿಗೆಯನ್ನು ರದ್ದುಪಡಿಸಲು ನನ್ನ ಸರ್ಕಾರವು ನಿರ್ಧರಿಸಿದೆ. ರೈತರ ಕೃಷಿ ಉತ್ಪಾದನಾ ವೆಚ್ಚವನ್ನು ಕಡಿಮೆ ಮಾಡುವ ಸಲುವಾಗಿ ರಸಗೊಬ್ಬರಗಳಿಗೆ ಸಹಾಯಧನ ನೀಡಬೇಕಾದ ಅಗತ್ಯವನ್ನು ತಿಳಿಸಿ, ಅದನ್ನು ಮೊದಲಿದ್ದ ಮಟ್ಟಕ್ಕೆ ತರಲು ಕೇಂದ್ರ ಸರ್ಕಾರದ ಮನವೊಲಿಸಲು ನನ್ನ ಸರ್ಕಾರವು ತೀರ್ಮಾನಿಸಿದೆ.

8. 1995ರ ಮಾರ್ಚ್ 31ರೊಳಗೆ ಇಡೀ ಅಸಲು ಹಣವನ್ನು ಪಾವತಿ ಮಾಡಿದರೆ ಸಹಕಾರ ವಲಯದಲ್ಲಿ ಬಾಕಿ ಇರುವ ಕೃಷಿ ಸಾಲಗಳ ಮೇಲಿನ ಸುಸ್ತಿ ಬಡ್ಡಿಯೂ ಸೇರಿದಂತೆ, ಬಾಕಿ ಇರುವ ಬಡ್ಡಿಯನ್ನು ಮನ್ನಾ ಮಾಡಲಾಗುವುದೆಂದು, 1994ರ ಡಿಸೆಂಬರ್ 28ರಂದು, ವಿಧಾನಮಂಡಲದ ಉಭಯ ಸದನಗಳನ್ನು ಉದ್ದೇಶಿಸಿ ಮಾಡಿದ ಭಾಷಣದಲ್ಲಿ ನಾನು ತಿಳಿಸಿದ್ದೆ. ನನ್ನ ಸರ್ಕಾರ ಈ ಆಶ್ವಾಸನೆಯನ್ನು ಈಡೇರಿಸಿದೆ. ಈ ಸಂಬಂಧ ಹೊರಡಿಸಿದ ಆದೇಶಗಳ ಅನ್ವಯ, ಸಹಕಾರ ಸಂಘ ಸಂಸ್ಥೆಗಳ ಮೂಲಕ ನೀಡಿರುವ ಅಲ್ಪಾವಧಿ ಮತ್ತು ಮಧ್ಯಮಾವಧಿ ಸಾಲಗಳ ಮೇಲಿನ ಶೇಕಡಾ 9ಕ್ಕಿಂತ ಹೆಚ್ಚಿನ ಬಡ್ಡಿಯನ್ನೂ ಸಹ ಮನ್ನಾ ಮಾಡಲಾಗುವುದು. ನಿಗದಿತ ಅವಧಿಯೊಳಗೆ ಮರುಪಾವತಿ ಮಾಡಿದ ಅಲ್ಪಾವಧಿ, ಮಧ್ಯಮಾವಧಿ ಹಾಗೂ ದೀರ್ಘಾವಧಿ ಪರಿವರ್ತಿತ ಸಾಲಗಳ ಮೇಲಿನ ಶೇಕಡ 9ರ ಮೇಲಿನ ಬಡ್ಡಿಯನ್ನು ಮುಂಬರುವ ವರ್ಷಗಳಲ್ಲಿ ಸರ್ಕಾರವೇ ಭರಿಸಿಕೊಡುವುದು. ಮನ್ನಾ ಮಾಡಲಾದ ಬಡ್ಡಿಯ ಮೊತ್ತವನ್ನು ಸರ್ಕಾರವು ಪೂರ್ಣವಾಗಿ ತುಂಬಿಕೊಡುತ್ತದೆ. ಇದರಿಂದಾಗಿ ಸಹಕಾರ ಸಂಘಗಳ ಮೇಲೆ ಹೆಚ್ಚಿನ ಹಣಕಾಸಿನ ಹೊರೆ ಬೀಳುವುದಿಲ್ಲ. ಕರ್ನಾಟಕ ರಾಜ್ಯ ಸಹಕಾರ ಸಂಘಗಳ ಮೇಲೆ ಹೆಚ್ಚಿನ ಹಣಕಾಸಿನ ಹೊರೆ ಬೀಳುವುದಿಲ್ಲ. ಕರ್ನಾಟಕ ರಾಜ್ಯ ಸಹಕಾರ ಕೃಷಿ

ಮತ್ತು ಗ್ರಾಮೀಣಾಭಿವೃದ್ಧಿ ಬ್ಯಾಂಕ್‌ಗೆ ಸರ್ಕಾರವು 31-3-1995ರ ಒಳಗೆ ಮುಂಗಡ ಪಾವತಿಯನ್ನು ಮಾಡಲು ಈಗಾಗಲೇ ಒಪ್ಪಿಕೊಂಡಿದೆ. ಹೀಗಿದ್ದರೂ ಸಹ ನಬಾರ್ಡ್ ಸಂಸ್ಥೆಯು ಪುನರ್ಧನ ನೀಡಿಕೆ ಸೌಲಭ್ಯವನ್ನು ನಿಲ್ಲಿಸಿದೆ. ನನ್ನ ಸರ್ಕಾರವು ಈ ಕುರಿತು ನಬಾರ್ಡ್‌ಮತ್ತು ಕೇಂದ್ರ ಸರ್ಕಾರದ ಜೊತೆ ಮಾತುಕತೆ ನಡೆಸುತ್ತಿದೆ. ಈ ವಿಷಯ ಸೌಹಾರ್ದಯುತವಾಗಿ ಇತ್ಯರ್ಥವಾಗುವುದೆಂಬ ನಂಬಿಕೆ ನನಗಿದೆ.

9. ಸರ್ಕಾರವು ಕುಡಿಯುವ ನೀರಿನ ಪರಿಸ್ಥಿತಿಯನ್ನು ಕುರಿತು ಪುನರಾವಲೋಕನ ಮಾಡಿದೆ. ಈ ಬೇಸಿಗೆಯಲ್ಲಿ ರಾಜ್ಯದ ಎಲ್ಲಾ ಹಳ್ಳಿ ಮತ್ತು ಪಟ್ಟಣ ಪ್ರದೇಶಗಳಿಗೂ ಸಾಕಷ್ಟು ಕುಡಿಯುವ ನೀರನ್ನು ಒದಗಿಸುವ ನನ್ನ ಸರ್ಕಾರ ಎಲ್ಲಾ ಪ್ರಯತ್ನಗಳನ್ನೂ ಮಾಡುವುದು. ಅದಕ್ಕೆ ಅಗತ್ಯವಾದ ಹಣವನ್ನು ಕೂಡ ಈಗಾಗಲೇ ಬಿಡುಗಡೆ ಮಾಡಿದೆ.

10. ನಮ್ಮ ಅಭಿವೃದ್ಧಿ ಕಾರ್ಯಕ್ರಮದಲ್ಲಿ ನೀರಾವರಿಗೆ ಮೊದಲಿನಿಂದಲೂ ಹೆಚ್ಚಿನ ಪ್ರಾಶಸ್ತ್ಯ ನೀಡಲಾಗಿದೆ. ನೀರಾವರಿ ವ್ಯಾಪ್ತಿಗೆ ತರಲು ಸಾಧ್ಯವಾಗುವ 55 ಲಕ್ಷ ಹೆಕ್ಟೇರುಗಳಲ್ಲಿ ಈಗಾಗಲೇ ಎಲ್ಲಾ ಮೂಲಗಳಿಂದ 31.97 ಲಕ್ಷ ಹೆಕ್ಟೇರು ನೀರಾವರಿ ಸಾಮರ್ಥ್ಯವನ್ನು ಸೃಜಿಸಲಾಗಿದೆ. 1995-96ರಲ್ಲಿ ಭಾರೀ ಮತ್ತು ಮಧ್ಯಮ ನೀರಾವರಿ ಯೋಜನೆಗಳಡಿಯಲ್ಲಿ 99,853 ಹೆಕ್ಟೇರುಗಳ ನೀರಾವರಿ ಸಾಮರ್ಥ್ಯವನ್ನು ಮತ್ತು ಸಣ್ಣ ನೀರಾವರಿ ಯೋಜನೆಯ ಅಡಿಯಲ್ಲಿ 9,000 ಹೆಕ್ಟೇರುಗಳ ನೀರಾವರಿ ಸಾಮರ್ಥ್ಯವನ್ನು ಸೃಜಿಸಲು ಉದ್ದೇಶಿಸಲಾಗಿದೆ. ಕೃಷ್ಣಾ ಜಲವಿವಾದ ನ್ಯಾಯ ಮಂಡಳಿಯು ರಾಜ್ಯಕ್ಕೆ ಹಂಚಿಕೆ ಮಾಡಿದ 734 ಟಿಎಂಸಿ ನೀರನ್ನು ಕ್ರಿ.ಶ. 2000ದ ವೇಳೆಗೆ ಸಂಪೂರ್ಣವಾಗಿ ಬಳಸಿಕೊಳ್ಳಲೇಬೇಕಾಗಿದೆ ಎಂಬುದು ಸನ್ಮಾನ್ಯ ಸದಸ್ಯರಿಗೆಲ್ಲಾ ತಿಳಿದಿರುವ ವಿಷಯ. ನೀರಿನ ಈ ಪ್ರಮಾಣವನ್ನು ಉಪಯೋಗಿಸಿಕೊಳ್ಳುವ ಮತ್ತು ಕೃಷ್ಣಾ ಮೇಲ್ದಂಡೆ ಯೋಜನೆಯನ್ನು ಕ್ರಿ.ಶ. 2000ದ ವೇಳೆಗೆ ಪೂರ್ಣಗೊಳಿಸುವ ದೃಷ್ಟಿಯಿಂದ "ಕೃಷ್ಣಾ ಭಾಗ್ಯ ಜಲ ನಿಗಮ" ಎಂಬ ಕಂಪನಿಯೊಂದನ್ನು ಸ್ಥಾಪಿಸಲಾಗಿದೆ. ಈ ನಿಗಮವು ಬಾಂಡುಗಳ / ಮುಖಾಂತರ 1995-96ರಲ್ಲಿ 800 ಕೋಟಿ ರೂಪಾಯಿಗಳನ್ನು ಎರಡು ಕಂತುಗಳಲ್ಲಿ/ ಸಂಗ್ರಹಿಸಲು ಉದ್ದೇಶಿಸಿದೆ. ಕಾವೇರಿ ನೀರನ್ನು ಹಂಚಿಕೊಳ್ಳುವ ವಿಷಯವು ಕಾವೇರಿ ಜಲವಿವಾದ ನ್ಯಾಯಮಂಡಳಿಯ ಮುಂದೆ ಇದೆ. ರಾಜ್ಯಸರ್ಕಾರವು ತನ್ನ ನ್ಯಾಯಸಮ್ಮತ ಪಾಲನ್ನು ಸಂಪೂರ್ಣವಾಗಿ ಉಪಯೋಗಿಸಿಕೊಳ್ಳಲು ಎಲ್ಲಾ ಪ್ರಯತ್ನವನ್ನೂ ಮಾಡುವುದು.

11. ನೀರು ಹರಿವಿನ ಪ್ರಮಾಣಕ್ಕನುಗುಣವಾಗಿ ನೀರನ್ನು ಸಹಕಾರ ಸಂಘಗಳ ಮೂಲಕ ಒದಗಿಸಲು ಮತ್ತು ನೀರಿನ ಮೇಲಿನ ನಿಗದಿತ ದರವನ್ನು ಸಂಗ್ರಹಿಸಲು ಸಾಧ್ಯವಾಗುವಂತೆ ನೀರಾವರಿ ಅಧಿನಿಯಮಕ್ಕೆ ತಿದ್ದುಪಡಿ ತರಲು ನನ್ನ ಸರ್ಕಾರ ಉದ್ದೇಶಿಸಿದೆ.

12. ಆರ್ಥಿಕ ಚಟುವಟಿಕೆಗಳ ಎಲ್ಲಾ ವಲಯಗಳಲ್ಲಿ ವಿದ್ಯುತ್ತಿನ ಬೇಡಿಕೆ ಹೆಚ್ಚುತ್ತಿರುವುದು ಸನ್ಮಾನ್ಯ ಸದಸ್ಯರೆಲ್ಲರಿಗೆ ತಿಳಿದ ವಿಷಯವೇ ಆಗಿದೆ. ವಿದ್ಯುತ್ ಕೊರತೆಯಿಂದಾಗಿ ರಾಜ್ಯದ ಕೈಗಾರಿಕಾ ಪ್ರಗತಿ ಕುಂಠಿತವಾಗಿರುವುದು ನಿಜ. ಈ ಕೊರತೆಯನ್ನು ನೀಗಿಸುವ ದಿಸೆಯಲ್ಲಿ ದಿಟ್ಟ ಹೆಜ್ಜೆಯನ್ನಿಟ್ಟು ಸ್ಥಾಪಿತ ಸಾಮರ್ಥ್ಯವನ್ನು ಕ್ರಿ.ಶ. 2000ದೊಳಗಾಗಿ 9000 ಮೆ.ವಾಟಿಗೆ ಹೆಚ್ಚಿಸಲು ನನ್ನ ಸರ್ಕಾರವು ನಿರ್ಧರಿಸಿದೆ. ಮಂಗಳೂರಿನ 1000 ಮೆ.ವಾಟ್ ಸಾಮರ್ಥ್ಯದ ಕೊಜೇಂಟ್ರಿಕ್ಸ್‌ನ ಶಾಖೋತ್ಪನ್ನ ವಿದ್ಯುತ್ ಸ್ಥಾವರದ ಜೊತೆಯಲ್ಲಿ ವಿದ್ಯುಚ್ಛಕ್ತಿಯ ಖರೀದಿ ಒಪ್ಪಂದಕ್ಕೆ ಈಗಾಗಲೇ ಸಹಿ ಮಾಡಲಾಗಿದೆ. ಬೆಂಗಳೂರು, ರಾಯಚೂರು, ಹೊಸಪೇಟೆ, ಮಂಗಳೂರು ಮತ್ತು ಚಾಮಲಾಪುರ (ಮೈಸೂರು ಜಿಲ್ಲೆ)ಯಲ್ಲಿ ಜಲವಿದ್ಯುತ್ ಯೋಜನೆಗೆ ಅನುಮೋದನೆ

ನೀಡುವ ವಿಚಾರ ನನ್ನ ಸರ್ಕಾರದ ತೀವ್ರ ಪರಿಶೀಲನೆಯಲ್ಲಿದೆ. ಈ ಯೋಜನೆಗಳು ಪೂರ್ಣಗೊಂಡರೆ, ರಾಜ್ಯದ ಇತಿಹಾಸದಲ್ಲಿ ಆರ್ಥಿಕ ಅಭಿವೃದ್ಧಿಯ ಒಂದು ಹೊಸ ಅಧ್ಯಾಯವೇ ಪ್ರಾರಂಭವಾಗಲಿದೆ.

13. ಉದಾರೀಕರಣ ಮತ್ತು ಮುಕ್ತ ಆರ್ಥಿಕ ನೀತಿಯ ಪರಿಣಾಮವಾಗಿ ವಿದೇಶೀ ಮತ್ತು ದೇಶೀಯ ಉದ್ಯಮಿಗಳು ರಾಜ್ಯದಲ್ಲಿ ಬಂಡವಾಳ ತೊಡಗಿಸುವುದರಲ್ಲಿ ಹೆಚ್ಚು ಹೆಚ್ಚಾಗಿ ಆಸಕ್ತಿ ತೋರಿಸಿದ್ದಾರೆ. ಕಳೆದ ಎರಡು ತಿಂಗಳ ಅವಧಿಯಲ್ಲಿ ಎಲ್ಲಾ ಪ್ರಮುಖ ದೇಶಗಳ ನಿಯೋಗಗಳು ರಾಜ್ಯಕ್ಕೆ ಭೇಟಿ ನೀಡಿ ಮಾತುಕತೆ ನಡೆಸಿವೆ. ಬೆಂಗಳೂರಿನ ಹತ್ತಿರ ಅಂತರ್ ರಾಷ್ಟ್ರೀಯ ವಿಮಾನ ನಿಲ್ದಾಣವನ್ನು ಸ್ಥಾಪಿಸುವ ಮತ್ತು ಬೆಂಗಳೂರಿನಲ್ಲಿ ಸಮೂಹ ತ್ವರಿತ ಸಾರಿಗೆ ಯೋಜನೆಯನ್ನು ಕಾರ್ಯಗತಗೊಳಿಸುವ ಪ್ರಸ್ತಾವನೆಗಳಿಗೆ ನನ್ನ ಸರ್ಕಾರದ ತ್ವರಿತ ತೀರ್ಮಾನವು ಎಲ್ಲರ ಪ್ರಶಂಸೆಗೆ ಪಾತ್ರವಾಗಿದೆ. ಅತ್ಯಂತ ಅಲ್ಪ ಕಾಲದಲ್ಲೇ ಸ್ಪಷ್ಟ, ಕ್ರಿಯಾತ್ಮಕ ಮತ್ತು ಬಂಡವಾಳ ಹೂಡಿಕೆಯ ಪರವಾದ ಪರಿಸ್ಥಿತಿ ರಾಜ್ಯದಲ್ಲಿ ನಿರ್ಮಾಣಗೊಂಡಿದೆ.

14. ರಾಜ್ಯದಲ್ಲಿನ ಬಹುತೇಕ ಜನರು ಗ್ರಾಮೀಣ ಪ್ರದೇಶಗಳಲ್ಲಿಯೇ ವಾಸಿಸುತ್ತಿದ್ದಾರಾದರೂ ಇತ್ತೀಚೆಗೆ ನಗರಗಳಿಗೆ ಅವರ ವಲಸೆ ಹೆಚ್ಚುತ್ತಿರುವುದು ಕಂಡು ಬಂದಿದೆ. ಇದೇ ಪ್ರವೃತ್ತಿ ಇನ್ನು ಮುಂದೆಯೂ ಮುಂದುವರಿಯುವ ಸಾಧ್ಯತೆ ಹೆಚ್ಚಾಗಿದೆ. ಕಳೆದ ಎರಡು ದಶಕಗಳಲ್ಲಿ ಬೆಂಗಳೂರಿನ ಜನಸಂಖ್ಯೆ ಹಿಂದೆ ಎಂದೂ ಕಂಡರಿಯದಷ್ಟು ಪ್ರಮಾಣದಲ್ಲಿ ಹೆಚ್ಚಿರುವುದು ಇದಕ್ಕೊಂದು ನಿದರ್ಶನ. ನಗರ ಪ್ರದೇಶಗಳ ಜನಸಂಖ್ಯೆಯ ತೀವ್ರ ಏರುವಿಕೆಯ ಜೊತೆಯಲ್ಲಿಯೇ, ವಸತಿ ಸೌಕರ್ಯದ ಅಭಾವ, ಕುಡಿಯುವ ನೀರಿನ ಕೊರತೆ, ಕಳಪೆ ನೈರ್ಮಲ್ಯ ವ್ಯವಸ್ಥೆ ಮತ್ತು ಮೂಲ ಸೌಲಭ್ಯಗಳ ಮೇಲೆ ದಿನದಿನವೂ ಹೆಚ್ಚುತ್ತಿರುವ ಒತ್ತಡ ಇವೆಲ್ಲಾ ಪ್ರಮುಖ ಸಮಸ್ಯೆಗಳಾಗಿದ್ದು ಅವುಗಳಿಗೆ ಕ್ಷಿಪ್ರ ಪರಿಹಾರ ಅನಿವಾರ್ಯವಾಗಿದೆ. ಈ ಹಿನ್ನೆಲೆಯಲ್ಲಿ ಬೆಂಗಳೂರು ನಗರವನ್ನು ಮಸಾನಗರ (ಮೆಗಾಸಿಟಿ) ಅಭಿವೃದ್ಧಿ ಕಾರ್ಯಕ್ರಮದಲ್ಲಿ ಸೇರಿಸಿಕೊಳ್ಳಲಾಗಿದೆ. ಇದಕ್ಕಾಗಿ ಈಗಾಗಲೇ 248.50 ಕೋಟಿ ರೂಪಾಯಿಗಳ ಸುಮಾರು ಇಪ್ಪತ್ತೆಂಟು ಯೋಜನೆಗಳು ಸಿದ್ಧವಾಗಿದ್ದು, ಅವುಗಳನ್ನು ಕರ್ನಾಟಕ ರಾಜ್ಯ ಮೂಲಭೂತ ಸೌಕರ್ಯಾಭಿವೃದ್ಧಿ ನಿಗಮ ಮತ್ತು ಇತರ ಸಂಸ್ಥೆಗಳು ಕಾರ್ಯರೂಪಕ್ಕೆ ತರಲಿವೆ. ಮತ್ತೊಂದು ಪ್ರಮುಖ ಮೂಲಭೂತ ಸೌಕರ್ಯಗಳ ಅಭಿವೃದ್ಧಿ ಯೋಜನೆಯನ್ನು ಏಶಿಯಾ ಅಭಿವೃದ್ಧಿ ಬ್ಯಾಂಕಿನ ನೆರವಿನೊಂದಿಗೆ ರೂಪಿಸಲಾಗುತ್ತಿದೆ. ಈ ಯೋಜನೆಯಂತೆ ರಾಮನಗರ ಮತ್ತು ಚನ್ನಪಟ್ಟಣಗಳನ್ನು ಉಪನಗರಗಳಾಗಿ ಅಭಿವೃದ್ಧಿಪಡಿಸಲಾಗುವುದು ಹಾಗೂ ತುಮಕೂರು ಮತ್ತು ಮೈಸೂರುಗಳನ್ನು ಬೆಂಗಳೂರಿಗೆ ಪರ್ಯಾಯ ಕೇಂದ್ರಗಳನ್ನಾಗಿ ಅಭಿವೃದ್ಧಿ ಪಡಿಸಲಾಗುವುದು. ಬೆಂಗಳೂರು ಮತ್ತು ಮೈಸೂರುಗಳ ಮಧ್ಯೆ ಎಕ್ಸ್‌ಪ್ರೆಸ್ ಹೆದ್ದಾರಿಯನ್ನು ನಿರ್ಮಿಸುವ ಯೋಜನೆ ಕೂಡ ಕಾರ್ಯೋನ್ಮುಖವಾಗಲಿದೆ.

15. ವಸತಿ ಸೌಕರ್ಯ ಪ್ರಮುಖ ಅಗತ್ಯಗಳಲ್ಲೊಂದು. ರಾಜ್ಯದ ಪ್ರತಿಯೊಬ್ಬ ವಸತಿಹೀನ ಪ್ರಜೆಗೂ ಅವನು ಗ್ರಾಮೀಣ ಪ್ರದೇಶದವನೇ ಆಗಲೀ ಅಥವಾ ನಗರ ಪ್ರದೇಶದವನೇ ಆಗಲಿತಲೆಯ ಮೇಲೆ ಒಂದು ಸೂರನ್ನು ಒದಗಿಸುವುದು ಸರ್ಕಾರದ ಉದ್ದೇಶ. ನಿವೇಶನ ಮತ್ತು ಮನೆ ಇಲ್ಲದ ವ್ಯಕ್ತಿಗಳನ್ನು ಗುರುತಿಸುವ ಸಮಗ್ರ ಸಮೀಕ್ಷೆಯನ್ನು ಈಗಾಗಲೇ ಕೈಗೆತ್ತಿಕೊಳ್ಳಲಾಗಿದೆ. ವಸತಿ ಸಮಸ್ಯೆ ಒಂದು ಬೃಹತ್ತಾದ ಸವಾಲಾಗಿದ್ದು, ಅದಕ್ಕೆ ತುಂಬಾ ಹೆಚ್ಚಿನ ಪ್ರಮಾಣದ ಹಣ ತೊಡಗಿಸಬೇಕಾದ ಅಗತ್ಯವಿದೆ. ಈಗಿರುವ ಸೀಮಿತ ಸಂಪನ್ಮೂಗಳಲ್ಲಿ ಸರ್ಕಾರ ಒಂಟಿಯಾಗಿ ಈ ಸವಾಲನ್ನು ಎದುರಿಸುವುದು ಕಷ್ಟಸಾಧ್ಯ. ಆದುದರಿಂದ, ಈ ಕ್ಷೇತ್ರದಲ್ಲಿ ಖಾಸಗಿ ವಲಯವೂ ಸಕ್ರಿಯವಾಗಿ ಪಾಲ್ಗೊಳ್ಳುವಂತೆ ಮಾಡಲು ಉದ್ದೇಶಿಸಲಾಗಿದೆ. ಅದಕ್ಕನುಗುಣವಾಗಿ ಖಾಸಗಿ ಬಂಡವಾಳ ಹೂಡಿಕೆಗೆ ಅವಕಾಶ ಕಲ್ಪಿಸಲು ಕಾನೂನಿನಲ್ಲಿ ಅವಶ್ಯಕವಾದ

ಬದಲಾವಣೆಗಳನ್ನು ಮಾಡಲು ನನ್ನ ಸರ್ಕಾರ ಆಲೋಚಿಸುತ್ತಿದೆ. 1976ರ ನಗರ ಭೂ ಪರಿಮಿತಿ ಮತ್ತು ನಿಯಂತ್ರಣ ಕಾಯ್ದೆಗೆ ಅಗತ್ಯ ಬದಲಾವಣೆಗಳನ್ನು ಮಾಡುವಂತೆ ಕೇಂದ್ರ ಸರ್ಕಾರವನ್ನು ಕೋರಲಾಗುವುದು.

16. ಯಾವುದೇ ಪ್ರದೇಶದ ಅಭಿವೃದ್ಧಿಗೆ ಉತ್ತಮ ರಸ್ತೆಗಳು ಅತ್ಯಾವಶ್ಯಕ. ಹೆಚ್ಚುತ್ತಿರುವ ವಾಹನಗಳ ಸಂಖ್ಯೆ ಮತ್ತು ಅಪಘಾತಗಳು ಸನ್ನಿವೇಶದಲ್ಲಿ ತ್ವರಿತ ಕ್ರಮವನ್ನು ತೆಗೆದುಕೊಳ್ಳುವುದು ಅತ್ಯಗತ್ಯ. ಹೆದ್ದಾರಿಗಳೂ ಸೇರಿದಂತೆ ನಮ್ಮ ಅನೇಕ ರಸ್ತೆಗಳ ಗುಣಮಟ್ಟವನ್ನು ಹೆಚ್ಚಿಸಬೇಕಾಗಿದೆ. ಆಯವ್ಯಯದ ಪುಸಕ್ತ ಇತಿಮಿತಿಯಿಂದ ಈ ಮೂಲ ಸೌಲಭ್ಯಕ್ಕೆ ಅಗತ್ಯ ಪ್ರಮಾಣದಲ್ಲಿ ಹಣ ಒದಗಿಸಲಾಗುತ್ತಿಲ್ಲ. ಆದುದರಿಂದ ಈ ರಸ್ತೆ ಸುಧಾರಣಾ ಕಾರ್ಯದಲ್ಲಿ ಖಾಸಗಿ ವಲಯವು ಪಾಲ್ಗೊಳ್ಳುವಂತೆ ಮಾಡುವುದು ನನ್ನ ಸರ್ಕಾರದ ಉದ್ದೇಶ. ಖಾಸಗಿ ವಲಯದ ಸಹಭಾಗಿತ್ವದಲ್ಲಿ ಬೆಂಗಳೂರು - ಮೈಸೂರು, ಬೆಂಗಳೂರು - ಹಾಸನ - ಮಂಗಳೂರು ಮತ್ತು ಬೆಂಗಳೂರು - ದೇವನಹಳ್ಳಿ ಮುಂತಾದ ಹೆದ್ದಾರಿಗಳ ನಿರ್ಮಾಣ, ಒಡೆತನ ಮತ್ತು ನಿರ್ವಹಣೆ ಆಧಾರದ ಮೇಲೆ ಅಥವಾ ನಿರ್ಮಾಣ, ಒಡೆತನ ಮತ್ತು ವರ್ಗಾವಣೆ ಆಧಾರದ ಮೇಲೆ ನಿರ್ಮಿಸಲು ಉದ್ದೇಶಿಸಲಾಗಿದೆ.

17. ಈಚೆಗೆ ಕಂಡುಬಂದಿರುವ ಹಣದುಬ್ಬರ ಸಮಾಜದ ದುರ್ಬಲ ವರ್ಗಗಳ ಮೇಲೆ ಪ್ರತಿಕೂಲ ಪರಿಣಾಮವನ್ನುಂಟು ಮಾಡಿದೆ. ದಿನೇ ದಿನೇ ಏರುತ್ತಿರುವ ಬೆಲೆಗಳ ದುಷ್ಪರಿಣಾಮವನ್ನು ತಡೆಯಲು ಆಹಾರ ಭದ್ರತಾ ಯೋಜನೆಯನ್ನು ಕಾರ್ಯಗತಗೊಳಿಸಲು ನನ್ನ ಸರ್ಕಾರ ಯೋಚಿಸಿದೆ. ಇಂತರಂತೆ, 1995ರ ಏಪ್ರಿಲ್ ಒಂದರಿಂದ ಪ್ರತಿ ಹಸಿರು ಕಾರ್ಡುದಾರನಿಗೂ ಒಂದು ಕೆ.ಜಿ.ಗೆ ಮೂರು ರೂಪಾಯಿ ಇಪ್ಪತ್ತು ಪೈಸೆಯಂತೆ ರಿಯಾಯಿತಿ ಬೆಲೆಯಲ್ಲಿ ಹತ್ತು ಕೆ.ಜಿ. ಅಕ್ಕಿಯನ್ನು ಒದಗಿಸಲಾಗುವುದು.

18. ಗ್ರಾಮೀಣ ಜನತೆಯ ಜೀವನ ಮಟ್ಟವನ್ನು ಸುಧಾರಿಸುವತ್ತ ಹೆಚ್ಚಿನ ಗಮನಹರಿಸಬೇಕಾಗಿದೆ. ಆಹಾರ ಪೂರೈಕೆ, ಆರೋಗ್ಯ ರಕ್ಷಣೆ ಮತ್ತು ಪ್ರಾಥಮಿಕ ಶಿಕ್ಷಣಗಳಿಗೆ ಹೂಡುವ ಮೊತ್ತಕ್ಕೂ ಗ್ರಾಮೀಣ ಬದುಕಿನ ಸುಧಾರಣೆಗೂ ನೇರ ಸಂಬಂಧವಿದೆ. ರಾಜ್ಯದಲ್ಲಿ 1357 ಪ್ರಾಥಮಿಕ ಆರೋಗ್ಯ ಕೇಂದ್ರಗಳು ಮತ್ತು 7993 ಉಪ ಆರೋಗ್ಯ ಕೇಂದ್ರಗಳು ಈಗಾಗಲೇ ಇವೆ. ಮುಂದಿನ ಐದು ವರ್ಷಗಳಲ್ಲಿ ನನ್ನ ಸರ್ಕಾರವು ಅಗತ್ಯವಿರುವ ಪ್ರಾಥಮಿಕ ಆರೋಗ್ಯ ಕೇಂದ್ರ ಮತ್ತು ಉಪಕೇಂದ್ರಗಳಿಗೂ ನೂತನ ಕಟ್ಟಡಗಳನ್ನು ಕಟ್ಟಿಕೊಡುತ್ತದೆ. ಎಲ್ಲೆಲ್ಲಿ ಬುಡಕಟ್ಟಿನ ಮತ್ತು ಹಿಂದುಳಿದ ವರ್ಗಗಳ ಕ್ಷೇತ್ರಗಳಲ್ಲಿ ಕೊರತೆ ಕಂಡುಬಂದಿದೆಯೋ ಅಲ್ಲಲ್ಲಿ ಹೊಸ ಆರೋಗ್ಯ ಕೇಂದ್ರಗಳನ್ನು ಪ್ರಾರಂಭಿಸಲಾಗುವುದು. ಇದರಿಂದ, ಪ್ರತಿಯೊಂದು ಕೇಂದ್ರಕ್ಕೂ ಆರೋಗ್ಯ ಸೇವೆ ಒದಗಿಸಬೇಕಾದಂಥ ಜನರ ಸಂಖ್ಯೆ ಕಡಿಮೆಯಾಗುವುದಲ್ಲದೆ, ಆರೋಗ್ಯ ಸೇವೆಯು ಇನ್ನೂ ಹೆಚ್ಚು ಸುಲಭವಾಗಿ ದೊರೆಯುವಂತಾಗುತ್ತದೆ. ಶಿಶು ಮತ್ತು ತಾಯಂದಿರ ಮರಣದ ಪ್ರಮಾಣವನ್ನು ಕಡಿಮೆ ಮಾಡುವತ್ತ ಹೆಚ್ಚಿನ ಗಮನ ನೀಡಲಾಗುವುದು. ಜನಸಂಖ್ಯಾ ನಿಯಂತ್ರಣ ಕಾರ್ಯಕ್ರಮಗಳನ್ನು ತೀವ್ರಗೊಳಿಸಲಾಗುವುದು. ರಾಜ್ಯದಲ್ಲಿ ಜಿಲ್ಲಾ ಮಟ್ಟದ ಆರೋಗ್ಯ ಸೇವಾ ವ್ಯವಸ್ಥೆಯಲ್ಲಿನ ಅಗತ್ಯಗಳನ್ನು ಪೂರೈಸಲು ಸರ್ಕಾರವು ವಿಶ್ವಬ್ಯಾಂಕ್‌ನಂತಹ ವಿದೇಶೀ ಸಂಸ್ಥೆಗಳೊಂದಿಗೆ ಬೃಹತ್ ಯೋಜನೆಗಳನ್ನು ಹಮ್ಮಿಕೊಳ್ಳಲು ಮಾತುಕತೆ ನಡೆಸುತ್ತಿದೆ.

19. ರಾಜ್ಯದಲ್ಲಿ ಖಾಸಗೀ ವಲಯದಲ್ಲಿ ವೈದ್ಯಕೀಯ ಸಂಸ್ಥೆಗಳ ಸಂಖ್ಯೆ ಸಾಕಷ್ಟಿದೆ. ಈ ಖಾಸಗೀ ವಲಯದ ಕಾರ್ಯ ವಿಧಾನವನ್ನು ನಿಯಂತ್ರಿಸಬೇಕಾದ ಅವಶ್ಯಕತೆ ಇದೆ. ಈ ಸಂಬಂಧವಾಗಿ ನನ್ನ ಸರ್ಕಾರವು, ಖಾಸಗೀ ವಲಯವು ಹೆಚ್ಚು

ಜವಾಬ್ದಾರಿಯುತವಾಗಿ ಕಾರ್ಯನಿರ್ವಹಿಸುವಂತೆ ಮಾಡಲು ಸಮಗ್ರ ಮಸೂದೆಯೊಂದನ್ನು ತರಲು ಉದ್ದೇಶಿಸಿದೆ. ಬಡ ಜನರನ್ನು ಶೋಷಿಸಿ, ಮೂತ್ರಪಿಂಡಗಳ ಕಲವು ಮತ್ತು ಕಸಿ ಮಾಡಿದಂತಹ ದುರದೃಷ್ಟ ಪ್ರಕರಣಗಳು ಇತ್ತೀಚೆಗೆ ಬೆಳಕಿಗೆ ಬಂದಿದ್ದು ಮಾನ್ಯ ಸದಸ್ಯರಿಗೆಲ್ಲಾ ತಿಳಿದೇ ಇದೆ. ಇಂತಹ ಘಟನೆಗಳು ಮರುಕಳಿಸುವುದನ್ನು ತಪ್ಪಿಸಲು ಕೇಂದ್ರ ಮಾನವ ಅಂಗಾಂಗ ಕಸಿ ಕಾಯ್ದೆಯನ್ನು ರಾಜ್ಯದಲ್ಲೂ ಜಾರಿಗೆ ತರಲು ನನ್ನ ಸರ್ಕಾರ ತೀರ್ಮಾನಿಸಿದೆ.

20. 1991ರ ಜನಗಣತಿಯ ಪ್ರಕಾರ ರಾಜ್ಯದಲ್ಲಿರುವ ಸಾಕ್ಷರತೆಯ ಪ್ರಮಾಣ ಶೇಕಡ 55.98 ಮಾತ್ರ. "ಸಾಕ್ಷರತಾ ಆಂದೋಲನ" ಈ ಪ್ರಮಾಣವನ್ನು ಗಣನೀಯವಾಗಿ ಹೆಚ್ಚಿಸಿದೆ. ಅರ್ಥಪೂರ್ಣ ಸುಧಾರಣೆ ಆಗಬೇಕಾದರೆ ಸಾಕ್ಷರತಾ ಗುಣಮಟ್ಟವನ್ನು ಹೆಚ್ಚಿಸುವುದು ಮತ್ತು ಪ್ರಾಥಮಿಕ ಶಿಕ್ಷಣ ವ್ಯವಸ್ಥೆಯನ್ನು ಬಲಪಡಿಸುವುದು ಅವಶ್ಯಕ. 1995-96ನೇ ಸಾಲಿನಲ್ಲಿ, ಶಾಲಾ ಕಟ್ಟಡ ಹಾಗೂ ಬೋಧನೆ - ಕಲಿಕೆ ಸಹಾಯಕ ಸಾಮಗ್ರಿಗಳು, ಇಂತಹ ಮೂಲ ಸೌಕರ್ಯಗಳನ್ನು ಹೆಚ್ಚಿನ ಪ್ರಮಾಣದಲ್ಲಿ ಒದಗಿಸಲಾಗುವುದು. ವಿಶ್ವಬ್ಯಾಂಕ್ ನೆರವಿನ ಯೋಜನೆಯಾದ ಜಿಲ್ಲಾ ಪ್ರಾಥಮಿಕ ಶಿಕ್ಷಣ ಕಾರ್ಯಕ್ರಮವನ್ನು ಇನ್ನಷ್ಟು ಚುರುಕಾಗಿ ಕಾರ್ಯಗತಗೊಳಿಸಲಾಗುವುದು.

21. ವೃತ್ತಿ ಶಿಕ್ಷಣ ಕಾಲೇಜುಗಳಲ್ಲಿನ ಪ್ರವೇಶ ಸಂಬಂಧವಾದ ತೊಂದರೆಗಳು ಮಾನ್ಯ ಸದಸ್ಯರಿಗೆಲ್ಲ ತಿಳಿದೇ ಇವೆ. ವಿದ್ಯಾರ್ಥಿಗಳ ಹಿತಾಸಕ್ತಿಯನ್ನು ಕಾಪಾಡುವ ಮತ್ತು ಕಾಲೇಜುಗಳನ್ನು ನಡೆಸುತ್ತಿರುವವರ ನೈಜ ಸಮಸ್ಯೆಗಳನ್ನು ಬಗೆಹರಿಸುವ ಉದ್ದೇಶದಿಂದ ಸಮಗ್ರ ಶಾಸನವೊಂದನ್ನು ತರಲು ನನ್ನ ಸರ್ಕಾರ ಉದ್ದೇಶಿಸಿದೆ.

22. ಪರಿಶಿಷ್ಟ ಜಾತಿಗಳು ಮತ್ತು ಪರಿಶಿಷ್ಟ ಪಂಗಡಗಳ ಜನರ ಶೈಕ್ಷಣಿಕ ಹಾಗೂ ಆರ್ಥಿಕ ಅಭಿವೃದ್ಧಿಗೆ ನನ್ನ ಸರ್ಕಾರವು ಹೆಚ್ಚಿನ ಗಮನ ನೀಡುತ್ತದೆ. ಲಾಭದಾಯಕ ಉದ್ಯೋಗ ಪಡೆಯಲು ಸಾಧ್ಯವಾಗುವಂತೆ ಅವರಿಗೆ ಸೂಕ್ತ ತರಬೇತಿಯನ್ನು ನೀಡಲಾಗುವುದು. ಈ ವರ್ಗದ ಗ್ರಾಮೀಣ ಕುಟುಂಬಗಳಿಗೆ ಜೀವನಾಧಾರವನ್ನು ಒದಗಿಸುವಂಥ ಆದಾಯೋತ್ಪಾದನಾ ಆಸ್ತಿಗಳನ್ನು ಕಲ್ಪಿಸಲಾಗುವುದು. ಪರಿಶಿಷ್ಟಜಾತಿ ಮತ್ತು ಪರಿಶಿಷ್ಟ ಪಂಗಡದ ಕುಟುಂಬಗಳ ವಿವರವಾದ ಸಾಮಾಜಿಕ - ಆರ್ಥಿಕ ಸಮೀಕ್ಷೆಯನ್ನು ನಡೆಸಲಾಗುವುದು. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಜನರ ಮೇಲೆ ನಡೆಯುವ ಯಾವುದೇ ತರಹದ ದೌರ್ಜನ್ಯ ಹಾಗೂ ದಬ್ಬಾಳಿಕೆಯನ್ನು ನನ್ನ ಸರ್ಕಾರ ತೀವ್ರವಾಗಿ ಪರಿಗಣಿಸಿ ತಪ್ಪಿತಸ್ಥರ ಮೇಲೆ ತೀವ್ರ ಕ್ರಮ ಕೈಗೊಳ್ಳುತ್ತದೆ. ನನ್ನ ಸರ್ಕಾರವು ಹಿಂದುಳಿದ ವರ್ಗಗಳ ಮೀಸಲಾತಿ ನೀತಿಯನ್ನು ರೂಪಿಸಲು ಕಾತುರವಾಗಿದೆ. 1995-96ನೇ ಸಾಲಿಗೆ ಮೀಸಲಾತಿ ನೀತಿಯನ್ನು ಅಧ್ಯಯನ ಮಾಡಿ, ಶಿಫಾರಸು ಮಾಡಲು ಸಚಿವ ಸಂಪುಟದ ಉಪಸಮಿತಿಯನ್ನು ರಚಿಸಲಾಗಿದೆ. ಅಲ್ಪಸಂಖ್ಯಾತ ವರ್ಗದ ಸಾಮಾಜಿಕ, ಆರ್ಥಿಕ ಅಭಿವೃದ್ಧಿಯತ್ತ ಹೆಚ್ಚಿನ ಒತ್ತು ನೀಡಲಾಗುವುದು.

23. ರಾಜ್ಯದ ಅಭಿವೃದ್ಧಿಯಲ್ಲಿ ಮಹಿಳೆಯರು ಸಕ್ರಿಯವಾಗಿ ಪಾಲ್ಗೊಳ್ಳುವಂತೆ ಮಾಡುವುದು ನನ್ನ ಸರ್ಕಾರದ ಮುಖ್ಯ ಉದ್ದೇಶಗಳಲ್ಲಿ ಒಂದು. ಮಹಿಳಾ ಆಯೋಗವನ್ನು ಶೀಘ್ರದಲ್ಲೇ ರಚಿಸಲಾಗುವುದು. ಆಯ್ದ ಯೋಜನೆಗಳ ಒಟ್ಟು ಫಲಾನುಭವಿಗಳಲ್ಲಿ ಕನಿಷ್ಠ ಮೂರನೇ ಒಂದು ಭಾಗದಷ್ಟು ಫಲಾನುಭವಿಗಳು ಮಹಿಳೆಯರೇ ಆಗಲಿರುವರು ಎಂಬುದನ್ನು ಸನದಕ್ಕೆ ತಿಳಿಸಲು ನನಗೆ ಸಂತೋಷವಾಗುತ್ತದೆ. ಮಹಿಳಾ ಸಮೃದ್ಧಿ ಯೋಜನೆಯನ್ನು ಮತ್ತಷ್ಟು ವಿಸ್ತರಿಸಲಾಗುವುದು.

24. ಮಲೆನಾಡಿನ ಪ್ರದೇಶಗಳಲ್ಲಿ ಅದರಲ್ಲೂ ಮುಖ್ಯವಾಗಿ ಚಿಕ್ಕಮಗಳೂರು ಹಾಸನ ಮತ್ತು ಕೊಡಗು ಜಿಲ್ಲೆಗಳಲ್ಲಿ ಬಹಳ ಕಾಲದಿಂದ ಸರ್ಕಾರಿ ಜಮೀನಿನಲ್ಲಿ ಕಾಫಿಯನ್ನು

ಅನಧಿಕೃತವಾಗಿ ಬೆಳೆಯಲಾಗುತ್ತಿದೆ. ಸಮಸ್ಯೆ ಹಳೆಯದಾದರೂ ಪರಿಹಾರಕ್ಕೆ ಎಟುಕದೇ ಹೋಗಿದೆ. ನನ್ನ ಸರ್ಕಾರವು ಕಾಫಿ ಮತ್ತಿತರ ನೆಡುತೋಪು ಬೆಳೆಗಳು ಬೆಳೆಯುತ್ತಿರುವ ಜಮೀನುಗಳನ್ನು ಕ್ರಮಬದ್ಧಗೊಳಿಸಲು ಉದ್ದೇಶಿಸಿದೆ. ಈ ಸಮಸ್ಯೆಯನ್ನು ಪರಿಶೀಲಿಸಿ ಅಗತ್ಯ ಮಾರ್ಪಾಟುಗಳನ್ನು ಸೂಚಿಸುವ ಸಲುವಾಗಿ ಸಚಿವ ಸಂಪುಟದ ಉಪಸಮಿತಿಯೊಂದನ್ನು ರಚಿಸಲಾಗಿದೆ.

25. ರಾಷ್ಟ್ರೀಯ ಪ್ರಮಾಣದ ಪ್ರಕಾರ ರಾಜ್ಯಗಳಲ್ಲಿ ಆಯಾ ರಾಜ್ಯದ ವಿಸ್ತಾರದ ಮೂರರಲ್ಲಿ ಒಂದು ಭಾಗದಷ್ಟು ಪ್ರದೇಶ ಅರಣ್ಯವಾಗಿರಬೇಕು. ನಮ್ಮ ರಾಜ್ಯದ ಭೌಗೋಳಿಕ ಪ್ರದೇಶದ ಶೇಕಡ 20ರಷ್ಟು ಪ್ರದೇಶ ಮಾತ್ರ ಸದ್ಯದಲ್ಲಿ ಅರಣ್ಯವಾಗಿದೆ. ಆದ್ದರಿಂದ, ನೆಡುತೋಪುಗಳನ್ನು ಬೆಳೆಸುವ ಭಾರೀ ಪ್ರಯತ್ನವನ್ನು ಮುಂದುವರಿಸಲಾಗುವುದು. ಅಕ್ರಮವಾಗಿ ಮರಗಳನ್ನು ಕಡಿಯುವುದನ್ನು ತಡೆಗಟ್ಟುವುದಾಗಿ ಕರ್ನಾಟಕ ಅರಣ್ಯ ಕಾಯ್ದೆ ಮತ್ತು ಕರ್ನಾಟಕ ವೃಕ್ಷ ಸಂರಕ್ಷಣಾ ಕಾಯ್ದೆಗೆ ವ್ಯಾಪಕ ತಿದ್ದುಪಡಿ ತರಲಾಗುವುದು. ಸಣ್ಣ ಮತ್ತು ಬಡರೈತರುಗಳ ಅನಧಿಕೃತವಾಗಿ ಒತ್ತಿಕೊಂಡಿರುವ ಅರಣ್ಯ ಭೂಮಿಯನ್ನು ಸಕ್ರಮಗೊಳಿಸುವ ಸಂಬಂಧವಾಗಿ ಕೇಂದ್ರ ಸರ್ಕಾರದೊಡನೆ ಸಮಾಲೋಚಿಸಲಾಗುವುದು.

26. ಆಡಳಿತದ ಎಲ್ಲಾ ಹಂತಗಳಲ್ಲಿ ಕನ್ನಡದ ಬಳಕೆಯನ್ನು ನನ್ನ ಸರ್ಕಾರವು ಹೆಚ್ಚಿನ ಹುರುಪಿನಿಂದ ಅನುಷ್ಠಾನಕ್ಕೆ ತರುತ್ತದೆ. ಕನ್ನಡ ಪುರೋಭಿವೃದ್ಧಿಗಾಗಿ ಈಗಿರುವ ಯೋಜನೆಗಳನ್ನು ಪುನಃ ಪರಿಶೀಲಿಸಲಾಗುತ್ತಿದೆ. ಈ ಕ್ಷೇತ್ರದಲ್ಲಿ ಕೆಲಸ ಮಾಡುತ್ತಿರುವ ಎಲ್ಲಾ ಸಂಸ್ಥೆಗಳನ್ನು ಬಲಪಡಿಸಲಾಗುವುದು.

27. ಸಾರ್ವಜನಿಕ ಕುಂದುಕೊರತೆಗಳನ್ನು ತ್ವರಿತವಾಗಿ ಪರಿಹರಿಸುವುದೇ ಒಳ್ಳೆಯ ಆಡಳಿತದ ಲಕ್ಷಣ. ಜನಸಂಪರ್ಕ ಕಾರ್ಯಕ್ರಮಗಳನ್ನು ತೀವ್ರಗೊಳಿಸಲಾಗುವುದು. ಕ್ಷೇತ್ರಮಟ್ಟದ ಅಧಿಕಾರಿಗಳು ಗ್ರಾಮೀಣ ಪ್ರದೇಶಗಳಿಗೆ ಕಡ್ಡಾಯವಾಗಿ ಭೇಟಿ ಕೊಡುವರು.

28. ಈ ನನ್ನ ಭಾಷಣದಲ್ಲಿ ಕೆಲವು ಪ್ರಮುಖ ವಿಷಯಗಳನ್ನು ಮಾತ್ರ ಪ್ರಸ್ತಾಪಿಸಿದ್ದೇನೆ. ರಾಜ್ಯದ ಸರ್ವತೋಮುಖ ಅಭಿವೃದ್ಧಿಗಾಗಿ ಇನ್ನೂ ಅನೇಕ ಕಾರ್ಯಕ್ರಮಗಳನ್ನು ನನ್ನ ಸರ್ಕಾರವು ಕಾರ್ಯಗತಗೊಳಿಸಲಿದೆ. ಸಾಮಾಜಿಕ ನ್ಯಾಯವನ್ನೊಳಗೊಂಡ ಆರ್ಥಿಕ ಅಭಿವೃದ್ಧಿಯೇ ನನ್ನ ಸರ್ಕಾರದ ಮುಖ್ಯ ಗುರಿ. ನನ್ನ ಭಾಷಣವನ್ನು ಮುಗಿಸುವ ಮುನ್ನ, ಉಭಯ ಸದನಗಳು ಕರ್ನಾಟಕದ ಜನರ ಹಿತದೃಷ್ಟಿಯನ್ನು ಗಮನದಲ್ಲಿಟ್ಟುಕೊಂಡು ತಮ್ಮ ಕಾರ್ಯಕಲಾಪಗಳನ್ನು ಪರಿಣಾಮಕಾರಿಯಾಗಿ ನಿರ್ವಹಿಸುತ್ತವೆ ಎಂದು ಆಶಿಸುತ್ತೇನೆ. ಈ ನಿಮ್ಮ ಪ್ರಯತ್ನ ಸಫಲವಾಗಲಿ.

ಜೈ ಹಿಂದ್, ಜೈ ಕರ್ನಾಟಕ

(ಸಭೆಯು ಮಧ್ಯಾಹ್ನ 1-40 ಘಂಟೆಗೆ ಪುನರ್ ಸಮಾವೇಶಗೊಂಡಿತು. ಸನ್ಮಾನ್ಯ ಸಭಾಧ್ಯಕ್ಷರಾದ **ರಮೇಶ್ ಕುಮಾರ್**ರವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು.)

ಅಧ್ಯಕ್ಷರು : ಸನ್ಮಾನ್ಯ ರಾಜ್ಯಪಾಲರ ಭಾಷಣದ ಪ್ರತಿಯನ್ನು ಕಾರ್ಯದರ್ಶಿಯವರು ಸಭೆಯ ಮುಂದೆ ಮಂಡಿಸುವುದು.

ಕಾರ್ಯದರ್ಶಿ : ಸನ್ಮಾನ್ಯ ರಾಜ್ಯಪಾಲರು ದಯಪಾಲಿಸಿದ ಭಾಷಣದ ಪ್ರತಿಯನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು : ಸನ್ಮಾನ್ಯ ರಾಜ್ಯಪಾಲರು ದಯಪಾಲಿಸಿದ ಭಾಷಣದ ಪ್ರತಿಯನ್ನು ಸಭೆಯ ಮುಂದೆ ಮಂಡಿಸಲಾಯಿತು.

ಸಭೆಯು ದಿನದ ಕಾರ್ಯಕಲಾಪಗಳನ್ನು ಇಲ್ಲಿಗೆ ಮುಗಿಸಿ ನಾಳೆ ಬೆಳಿಗ್ಗೆ 11-00 ಗಂಟೆಗೆ ಸಮಾವೇಶಗೊಳ್ಳುವುದು.

(ಸಭೆಯು 1-43ಕ್ಕೆ ಮುಕ್ತಾಯಗೊಂಡು ಪುನಃ ನಾಳೆಗೆ ಬೆಳಿಗ್ಗೆ 11-00 ಗಂಟೆಗೆ ಸಮಾವೇಶಗೊಳ್ಳಲು ನಿರ್ಧರಿಸಿತು.)